ಆಗಬೇಕಾಗಿದೆ.’ ಬದಿಯಲ್ಲಿಟ್ಟಿದ್ದ ಪುಸ್ತಕ ತೆರೆದು ಆ ಕಾಲದ ಜನರ, ಸೈನಿಕರ, ಚಿಕ್ಕ ಮಕ್ಕಳ, ನರ್ತಕಿಯರ, ಆಸ್ಥಾನ ಗಾಯಕರ ವಿವಿಧ ಉಡುಪುಗಳನ್ನು ತೋರಿಸುತ್ತ, ತಾನು ಮೆಚ್ಚಿದ ನಮ್ಮ ವಿನ್ಯಾಸಗಳಲ್ಲಿ ಮಾಡಬೇಕಾದ ಮಾರ್ಪಾಡುಗಳ ಬಗ್ಗೆ ವಿವರಣೆ ಕೊಡತೊಡಗಿದಳು.

‘ಉಡುಪುಗಳು ಯಾರಿಗೆ? ಯಾವ ಅಳತೆ....’ ಸಂದೇಹದಲ್ಲೇ ಕೇಳಿದೆ.

‘ಮತ್ತೆ ಯಾರಿಗೆ? ಇವರಿಗೇ...’ ಎಂದು ಮೇಜಿನ ಮೇಲೆ ಹರಡಿದ್ದ ಗೊಂಬೆಗಳನ್ನು ತೋರಿಸುತ್ತ, ಕಣ್ಣರಳಿಸಿ ಹೇಳಿದಳು. ಸ್ವರದಲ್ಲಿ ಉಮೇದಿತ್ತು. ವಾತ್ಸಲ್ಯದ ಹರಹಿತ್ತು. ಕಷ್ಟಪಟ್ಟು ನನ್ನ ಭಾವನೆಗಳನ್ನು



ತಡೆಹಿಡಿದೆ. ಪುಣ್ಯಕ್ಕೆ ನನ್ನ ಸಹಾಯಕಿಯೂ ಯಾವುದೇ ಉದ್ಗಾರ ತೆಗೆಯಲಿಲ್ಲ. ಅಂದರೆ ಪೆರಿನಾಝುಳ ಮಾತಿನ ರೀತಿ ಹಾಗಿತ್ತು. ಗೊಂಬೆಗಳನ್ನು ನಮ್ಮ ಸರೀಕರಂತೆ ನೋಡುವುದು, ಅವರಿಗಾಗಿ ಲಕ್ಷಗಟ್ಟಲೆಯ ಉಡುಪು ಮಾಡಿಸುವುದು ತೀರ ಸಾಮಾನ್ಯ ಎಂಬಂತಿತ್ತು ಅವಳ ನಡೆ-ನುಡಿ. ಅಂತೂ ಪೆರಿನಾಝುಳ ಬಗ್ಗೆ ಅದೆಷ್ಟೋ ಕತೆ-ದಂತಕತೆ-ನಿಗೂಢತೆಗಳನ್ನು ಕೇಳಿ ತಯಾರಾಗಿ ಬಂದಿದ್ದರೂ, ಇಂತಹದೊಂದನ್ನು ಮಾತ್ರ ನಿರೀಕ್ಷಿಸಿಯೇ ಇರಲಿಲ್ಲ.

ಯಾವುಯಾವುದಕ್ಕೆ ಯಾವ ಉಡುಪು ಹೊಲಿಯಬೇಕೆಂಬುದನ್ನು ವಿಶದಪಡಿಸುತ್ತಿದ್ದಂತೆ ನಾನು ವಿವರ ಬರಕೊಳ್ಳತೊಡಗಿದೆ. ಪ್ರಣೀತಳು ಅಳತೆಪಟ್ಟಿ ಹಿಡಿದು ಅಳತೆಗಳನ್ನೆಲ್ಲ ಗುರುತಿಸಿಕೊಂಡಳು. ಸುಮಾರು ನೂರಎಂಭತ್ತು ಬೊಂಬೆಗಳಿಗೆ ಹೊಸ ಉಡುಪುಗಳು ತಯಾರಾಗಬೇಕಿದ್ದವು.

‘ದಿಲ್ಲಿಯಲ್ಲಿ ಚಳಿ ಜಾಸ್ತಿಯಲ್ಲವೇ?’ ಎಂದು ಅವಳು ಸುರುಮಾಡಿದಾಗ, ‘ಹೌದೌದು’ ಎಂದು ತಲೆಯಾಡಿಸಿದೆ. ಅವಳ ಪರಿಕಲ್ಪನೆಯ ಗ್ರಹಿಕೆಗೆ ನನ್ನ ಮನಸ್ಸು ಹೊಂದಿಕೊಂಡಾಗಿತ್ತು. ಅಷ್ಟು ಬೇಗ!

‘ಹೊರಾಂಗಣದಲ್ಲಿರುವ ಯೋಧರಿಗೆ, ಪಹರೆಯವರಿಗೆ ಚಳಿಗಾಲದಲ್ಲಿ ತೊಡಲು ಬೆಚ್ಚಗಿನ ಉಡುಪುಗಳು ಬೇಕು. ಅವರವರ ಉಡುಪುಗಳಿಗೆ ಹೊಂದುವಂತಿರಬೇಕು. ಒಟ್ಟು...’ ಒಂದು, ಎರಡು ಎಂದು ಲೆಕ್ಕಮಾಡತೊಡಗಿದಳು.

ಕೆಳಗಿಳಿಯುತ್ತಾ, ಅಗತ್ಯದ ಕಾಗದಪತ್ರಗಳು ತಯಾರಾದ ಕೂಡಲೇ ಹಣ ಬಿಡುಗಡೆ ಮಾಡುವುದಾಗಿ ಹೇಳಿದಳು. ಉಳಿದ ಕೋಣೆಗಳಲ್ಲೂ ಬೊಂಬೆಗಳಿವೆಯೇ ಎಂದು ನನಗೆ ಕುತೂಹಲವಾಯಿತಾದರೂ ಕೇಳಲು ದಾಕ್ಷಿಣ್ಯವೆನಿಸಿತು. ಅಲ್ಲಿಂದ ನಮ್ಮನ್ನು ಮೊದಲನೇ ಮಹಡಿಯಲ್ಲಿರುವ ಗ್ರಂಥಾಲಯಕ್ಕೆ ಕರೆದುಕೊಂಡು ಹೋಗಲಾಯಿತು. ಮೂರೂ ಗೋಡೆಗಳಲ್ಲಿ ನೆಲದಿಂದ ಚಾವಣಿಯ ವರೆಗೂ ಅಚ್ಚುಕಟ್ಟಾಗಿ ಜೋಡಿಸಿಟ್ಟ ಪುಸ್ತಕದ ಕವಾಟುಗಳು. ನಾಲ್ಕನೆಯ ಗೋಡೆಯ ಬಹುಭಾಗವನ್ನು ಆಕ್ರಮಿಸಿದ ವಿಶಾಲವಾದ ಕಿಟಕಿಯಲ್ಲಿ ಅರಬ್ಬೀ ಸಮುದ್ರದ ತೆರೆಗಳು ದಡಕ್ಕೆ ಅಪ್ಪಳಿಸುವುದು ದೂರದಿಂದ ಕಾಣುತ್ತಿತ್ತು. ಒಂದು ಬದಿಯ ಕವಾಟಿನ ತುಂಬ ಬಟ್ಟೆ, ಉಡುಪು, ಫ್ಯಾಶನ್ನುಗಳ ಪುಸ್ತಕಗಳೇ ತುಂಬಿದಂತಿದ್ದುವು. ಉಡುಪು ತಯಾರಿಯ ವೇಳೆ, ಯಾವುದೇ ಪುಸ್ತಕದ ಅಗತ್ಯ ಬಿದ್ದರೂ ಇಲ್ಲಿನ ಗ್ರಂಥಾಲಯದ ಉಪಯೋಗ ಪಡೆಯಬಹುದೆಂಬುದನ್ನು ಒತ್ತಿ ತಿಳಿಸಿದ ಅವಳು, ಇನ್ನು ಮುಂದಿನ ವಿಚಾರಗಳನ್ನು ದಾಸ್‌ಗುಪ್ತ ನೋಡಿಕೊಳ್ಳುತ್ತಾನೆಂದು ಹೇಳಿ, ನಮ್ಮಿಂದ ಬೀಳ್ಕೊಟ್ಟಳು.

ಈ ಹಿಂದೆ ಕಲ್ಕತ್ತದ ವಸ್ತು ಸಂಗ್ರಹಾಲಯದಲ್ಲಿ ಪ್ರಾಚೀನ ವಸ್ತುಗಳ ದಾಖಲೆ ಕೆಲಸ ನೋಡಿಕೊಳ್ಳುತ್ತಿದ್ದ ದಾಸ್‌ಗುಪ್ತನಿಗೆ ವಿಷಯದ ಪರಿಜ್ಞಾನವಿತ್ತು. ಮಾಡುವ ಕೆಲಸದಲ್ಲಿ ಒಲವಿತ್ತು. ಎಲ್ಲಕ್ಕಿಂತ ಹೆಚ್ಚಾಗಿ